ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: (ಮಾನ್ಯ ಕಂದಾಯ ಸಚಿವರು):– ಮಾನ್ಯ ಉಪಾಧ್ಯಕ್ಷರೇ, 2000 ದ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ:

"2000 ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೫) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಮಾನ್ಯ ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, 2000 ದ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

+ಶ್ರೀ ಬಿ. ಸೋಮಶೇಖರ್ : ಈಗ ತಾವು ಸೆಕ್ಷನ್ 94(ಬಿ) ಗೆ ಅಮೆಂಡ್‌ಮೆಂಟನ್ನು ತರುತ್ತಿರುವುದು. ಈ ವಿಚಾರ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ಏನು ಬಗರ್‌ಹುಕುಂ ಸಾಗುವಳಿದಾರರು 1990 ರೊಳಗೆ ಅರ್ಜಿ ಹಾಕದೇ ಇರುವವರಿಗೆ ಅವಕಾಶ ಇರಲಿಲ್ಲ. ಸಹಸ್ರಾರು ಜನರು ಅರ್ಜಿಗಳನ್ನು ಹಾಕುವುದಕ್ಕಾಗದೇ ಅವರ ಜಮೀನುಗಳನ್ನು ತಮ್ಮ ಹೆಸರಿಗೆ ಮಾಡಿಕೊಳ್ಳುವುದಕ್ಕೆ ಆಗಿರಲಿಲ್ಲ. ಅದರಲ್ಲಿ ಕಾನೂನು ತೊಡಕಿತ್ತು. ನಮ್ಮ

ಸರ್ಕಾರ ಈ ರೀತಿ ಯಾರ್ಯಾರು ಬಿಟ್ಟುಹೋಗಿದ್ದಾರೆ, ಅಂಥವರ ಹೆಸರುಗಳನ್ನು ಸೇರಿಸಿ ಅವರ ಹೆಸರಿಗೆ ಸಾಗುವಳಿ ಕೊಡುವ ಅವಕಾಶವನ್ನು ಮಾಡಿಕೊಟ್ಟೆವು. ಆವತ್ತು ತಾವು ಇಲ್ಲಿದ್ದಿರಿ. ನಾನೇನು ಮಾಡಿದೆ, ಈ ಒಂದು ರಿಸ್ಟ್ರಿಕ್ಷನ್ ಏನು ಇದೆ, ಇದನ್ನು ಮುಂದುವರೆಸಬೇಕು, ಮತ್ತೆ ಅವರಿಗೆ ಅವಕಾಶ ಕೊಡಬೇಕು, ಅವರಿಗೆ ರೆಗ್ಯುಲರೈಜ್ ಮಾಡುವ ಅವಕಾಶ ಕೊಡಬೇಕು ಎಂದು ಹೇಳಿ ನಾವು ಅದನ್ನು ತಂದೆವು. ಅದಕ್ಕೆ ತಾವೇನು ಉತ್ಸುಕತೆಯಿಂದ ಹೇಳಿದಿರಿ, ಈ ಒಂದು ರಿಸ್ಟ್ರಿಕ್ಷನ್ನನ್ನು ತೆಗೆಯಬೇಡಿ, ಒಂದೇ ವರ್ಷದೊಳಗೆ ಮಾಡಬೇಕು, ಇಲ್ಲದಿದ್ದರೆ ಅವರು ಮಾಡುವುದಿಲ್ಲ ಎಂದು ತಾವು ಹೇಳಿದಿರಿ. ಆಗ ಒಂದೇ ವರ್ಷದಲ್ಲಿ ಮಾಡಬೇಕಾದರೆ ಅದೇ ರೀತಿ ಆಗಲಿ ಎಂದು ಹೇಳಿ ಒಂದೇ ವರ್ಷಕ್ಕೆ ಮಾಡಿದೆವು. ಒಂದು ವರ್ಷ ಯಾವಾಗ ಮುಗಿಯಿತು ಎಂದರೆ 31 ನೇ ಅಕ್ಟೋಬರ್ 1999ಕ್ಕೆ ಮುಗಿಯಿತು. ಅಷ್ಟರೊಳಗೆ ಎಷ್ಟು ಕೆಲಸವಾಗಿದೆ ಎಂದು ಹೇಳಿದರೆ ಯಾರ್ಯಾರು ಸಾಗುವಳಿದಾರರು ಬಿಟ್ಟು ಹೋಗಿದ್ದರೋ ಅವರೆಲ್ಲರನ್ನೂ ಗುರುತಿಸಿದ್ದಾರೆ. ಇವತ್ತು ಸುಮಾರು 10,54,000 ಅರ್ಜಿಗಳು ಬಂದಿದೆ. ಸಮಿತಿಯವರು ಸಾಗುವಳಿ ಚೀಟಿ ಕೊಡುವುದಷ್ಟೇ ಕೆಲಸ ಉಳಿದಿದೆ. ನೀವು 6 ತಿಂಗಳಿನಿಂದಲೂ ಸಮಿತಿಯನ್ನು ರಚಿಸಿಲ್ಲ. ಇವತ್ತು ಒಂದು ವರ್ಷ ಬೇಕು. ಅಷ್ಟರೊಳಗೆ ಆಗಿದ್ದರೆ, ನಾವೇ ಮುಗಿಸುತ್ತಿದ್ದೆವು. 3 ತಿಂಗಳ ಮುಂಚೆ ಚುನಾವಣೆ ಬಂತು. ನಮ್ಮ ಸರ್ಕಾರ ಸಂಪೂರ್ಣವಾಗಿ ಕೆಲಸ ಮಾಡುವುದಕ್ಕಾಗಲಿಲ್ಲ. ಆದರೆ, ಅವಕಾಶ ಕೊಟ್ಟೆವು, ಕೆಲಸ ನಡೆಯುತ್ತಿತ್ತು. ರಿಸ್ಟ್ರಿಕ್ಷನ್ ಇಲ್ಲದಿದ್ದರೆ, 10 ವರ್ಷಗಳಾದರೂ ಅಧಿಕಾರಿಗಳು ಕೆಲಸ ಮಾಡುವುದಿಲ್ಲ. ಇನ್ನು 10 ಪರ್ಸೆಂಟ್ ಕೆಲಸವಿದೆ. ಇದಕ್ಕೆ ರಿಸ್ಟ್ರಿಕ್ಷನ್ ಇಲ್ಲವೆಂದರೆ, ಬಡವರಿಗೆ ಸಹಾಯ ಮಾಡುವ ಕೆಲಸವನ್ನು ಯಾರಾದರೂ ಬೇಗ ಮಾಡುತ್ತಾರೆಯೇ? ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ, ತಾವೇ ಹೇಳಿದ್ದನ್ನು ನಾನಿಲ್ಲಿ ಹೇಳುತ್ತಿದ್ದೇನೆ, ಒಂದು ವರ್ಷ ಬೇಡ, 6 ತಿಂಗಳು ಕೊಡಿ. ಇಲ್ಲದಿದ್ದರೆ, ಅಧಿಕಾರಿಗಳು ಕೆಲಸ ಮಾಡುವುದಿಲ್ಲ. ಅರ್ಜಿಗಳು ರೆಡಿ ಇವೆ. ನೀವು ಸಮಿತಿ ರಚಿಸಬೇಕು. ತೀರ್ಮಾನ ಮಾಡಿ ಸಾಗುವಳಿ ಚೀಟಿ ಕೊಡಬೇಕು. ಆದಾದರೆ, ಬಡವರಿಗೆ ಸಹಾಯ ಮಾಡಿದ ಹಾಗಾಗುತ್ತದೆ. ರಿಸ್ಟ್ರಿಕ್ಷನ್ ಇಲ್ಲದೆ, ಇನ್ನೂ 10 ವರ್ಷಗಳಾದರೂ ಆಗಬಹುದೆಂದರೆ, ಅದಾಗುವುದಿಲ್ಲ. ರಿಸ್ಟ್ರಿಕ್ಷನ್ ಒಂದು ವರ್ಷವೆನ್ನುವುದು ಬೇಡಿ, 6 ತಿಂಗಳು ಮಾಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ರಿಸ್ಟ್ರಿಕ್ಷನ್ ಹಾಕಿಲ್ಲ.

ಶ್ರೀ ಬಿ. ಸೋಮಶೇಖರ್:- ಮತ್ತೆ 6 ತಿಂಗಳೊಳಗೆ ಮಾಡಬೇಕೆಂದು ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ:- ಒಂದು ವರ್ಷ ಲ್ಯಾಪ್ಸಾಗಿದೆ ಎಂದು ಹೇಳಿ ಎಕ್ಸ್‌ಟೆನ್‌ಷನ್ ತೆಗೆದುಕೊಂಡಿದ್ದಾರೆ. ಎಕ್ಸ್‌ಟೆನ್‌ಷೆನ್‌ನಲ್ಲಿ ಏನು ಮಾಡಿದ್ದಾರೆಂದರೆ, ಅನಿರ್ದಿಷ್ಟ ಸಮಯ ಕೊಟ್ಟಿದ್ದಾರೆ. ಆ ರೀತಿ ಕೊಡಬಾರದು. ಕಟ್-ಆಫ್ ಡೇಟ್ ಕೊಡಬೇಕು. ಶ್ರೀ ದೇವರಾಜ ಅರಸುರವರ ಕಾಲದಲ್ಲಿ ಶ್ರೀ ಬಸವಲಿಂಗಪ್ಪನವರು ಕಂದಾಯ ಮಂತ್ರಿಗಳಾಗಿದ್ದ ಕಾಲದಲ್ಲಿ ತಂದ ಲ್ಯಾಂಡ್ ರಿಫಾರ್ಮ್ಸ್ ಕೆಲಸ ಇನ್ನೂ ನಡೆಯುತ್ತಿದೆ. 20-25 ವರ್ಷಗಳಾದರೂ ಅದು ಮುಗಿದಿಲ್ಲ. ಅದೇ ರೀತಿ ಫಾರಂ ನಂ. 50ನ್ನು ಹಾಕಿಕೊಂಡಿದ್ದು, ಅದರಲ್ಲೂ ಭೂ ಮಂಜೂರಾತಿ ಸಮಿತಿಗಳು ಅಕ್ರಮವಾಗಿರುವುದನ್ನು ಸಕ್ರಮ ಮಾಡುವುದನ್ನು ಇನ್ನೂವರೆಗೆ

ಮಾಡಿಲ್ಲ. ಲಕ್ಷಾಂತರ ಮೊಕದ್ದಮೆಗಳು ಬಾಕಿ ಇವೆ. ಅದೇ ರೀತಿ ಫಾರಂ ನಂ.53 ನ್ನು ನಮ್ಮ ಸರ್ಕಾರ ಇದ್ದಾಗ ಕೊಟ್ಟ ಅವಕಾಶವನ್ನು, ಇದರಲ್ಲಿ 10 ಲಕ್ಷ 84 ಸಾವಿರ ಅರ್ಜಿಗಳು ಬಂದದ್ದನ್ನು ಇವತ್ತಿನವರೆಗೆ ಅದನ್ನು ನೋಡುವ ವ್ಯವಸ್ಥೆಯಾಗಿ, ಅವರಿಗೆ ಸಕ್ರಮೀಕರಣ ಮಾಡುವುದು. ನಿರ್ದಿಷ್ಟ ಭೂಮಿಗಳನ್ನು ರೆಗ್ಯುಲರೈಜ್ ಮಾಡುವ ಕೆಲಸ ಆಗಬೇಕಿದೆ. ಅನಿರ್ದಿಷ್ಟ ಸಮಯ ಬೇಡ, ಕಟ್-ಆಫ್ ಡೇಟ್ ಹಾಕಿ, ಒಂದು ವರ್ಷದಲ್ಲಿ ಆಗಬೇಕು ಅಥವಾ ಎರಡು ವರ್ಷಗಳಲ್ಲಾಗಬೇಕು. ಇಲ್ಲದಿದ್ದರೆ, ತಾವು ಪ್ರಾಧಿಕಾರಗಳನ್ನು ರಚಿಸಿ, ಅಡಿಷನಲ್ ಪ್ರಾಧಿಕಾರಗಳನ್ನು ಹಾಕಿ, ಅಡಿಷನಲ್ ಕಮಿಷನರ್, ಡೆಪ್ಯುಟಿ ಕಮಿಷನರ್‌ಗಳನ್ನು ಯಾರನ್ನು ಬೇಕಾದರೂ ಹಾಕಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಪ್ರತಿ ತಾಲ್ಲೂಕಿಗೆ ಎ.ಸಿ.ಗಳನ್ನು ನೇಮಿಸಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಈಗಾಗಲೇ ಸಮಿತಿಗಳ ರಚನೆ ತಡವಾಗಿದೆ. ಭೂ-ಮಂಜೂರಾತಿ ಸಮಿತಿ, ಲ್ಯಾಂಡ್ ರಿಫಾರ್ಮ್ ಸಮಿತಿಗಳಿರಬಹುದು, ಇನ್ನೂ ರಚನೆಯಾಗಿಲ್ಲ. ಅದನ್ನು ಆದಷ್ಟು ಬೇಗ ಮಾಡಿ. ಈಗಾಗಲೇ ಹೇಳಿದ ಹಾಗೆ, 25 ವರ್ಷಗಳಾದರೂ ಲ್ಯಾಂಡ್ ರಿಫಾರ್ಮ್ ಕೆಲಸ ಮುಗಿದಿಲ್ಲ. ಫಾರಂ ನಂ.50ರ ಕೆಲಸ ಇನ್ನೂ ಮುಗಿದಿಲ್ಲ. ಅವರಿಗೆ ಎಷ್ಟು ದಿವಸಗಳಾದರೂ ಮಾಡಿ ಎಂದರೆ, ಹತ್ತಾರು ವರ್ಷಗಳಾಗುತ್ತದೆ. ಒಂದು ವರ್ಷದಲ್ಲಿ ಆಗಬೇಕೆಂದು ಹೇಳಿದರೆ, 2001ಕ್ಕೆ ಮುಗಿಯಬೇಕೆಂದು ಮಾಡಿದಾಗ ಬಡವರಿಗೆ ಜಮೀನು ಸಿಗುತ್ತದೆ. ರೈತನಿಗೆ ಪ್ಲಾಂಟ್ ಸಿಗುತ್ತದೆ. ಹಕ್ಕುಪತ್ರ ಸಿಗುತ್ತದೆ. ಅವನಿಗೆ ಮನಸೋ ಇಚ್ಛೆ ಬಿಟ್ಟರೆ, ಬಹಳ ತಪ್ಪಾಗುತ್ತದೆ, ಅದಾಗಬಾರದು.

ಶ್ರೀ ಬಿ. ಸೋಮಶೇಖರ್: ಬಡವರು 20-25 ವರ್ಷಗಳಿಂದ ಅನಧಿಕೃತ ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ಒಂದು ವರ್ಷದೊಳಗೆ ಮಾಡಬೇಕೆಂಬ ಸದುದ್ದೇಶದಿಂದ ಕಟ್-ಆಫ್ ಡೇಟ್ ಒಂದು ವರ್ಷ ಕೊಟ್ಟೆವು. ಮಾನ್ಯ ಕಾಗೋಡು ತಿಮ್ಮಪ್ಪನವರು ಒತ್ತಾಯ ಮಾಡಿದ ಮೇಲೆ ಕೊಟ್ಟೆವು. ನೀವು ನಿರ್ದಿಷ್ಟ ಕಾಲ ಕೊಡದಿದ್ದರೆ, ನಿಮ್ಮ ಅಧಿಕಾರಿಗಳು ಕೆಲಸ ಮಾಡುವುದಿಲ್ಲ. ಆ ದೃಷ್ಟಿಯಿಂದ ಕಟ್-ಆಫ್ ಡೇಟ್ ಒಂದು ವರ್ಷ ಕೊಟ್ಟೆವು. 90 ಪರ್ಸೆಂಟ್ ಕೆಲಸ ನಮ್ಮ ಕಾಲದಲ್ಲಾಗಿದೆ. ನೀವು ಅನಿರ್ದಿಷ್ಟ ಕಾಲವೆಂದರೆ, ಇನ್ನೂ 10 ವರ್ಷ ತೆಗೆದುಕೊಳ್ಳುತ್ತಾರೆ. 6 ತಿಂಗಳೆಂದು ಮಾಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ನಿಧಾನವಾಗುತ್ತದೆ, ಕಟ್-ಆಫ್ ಡೇಟ್ ಬೇಕೆಂದು ಸದಸ್ಯರು ಹೇಳುತ್ತಿದ್ದಾರೆ. ಆದರೆ, ಆದಷ್ಟು ಬೇಗ ಎಲ್ಲೆಲ್ಲಿ ನಿಧಾನವಾಗಿದೆ, ಅರ್ಜಿಗಳು ಎಲ್ಲಿ ಜಾಸ್ತಿ ಇವೆ, ಅಲ್ಲಿ ಅಡಿಷನಲ್ ಕಮಿಟಿ ಮಾಡಿ ವಿಲೇವಾರಿ ಮಾಡೋಣ.

ಶ್ರೀ ಬಿ. ಸೋಮಶೇಖರ್ : ನಿರ್ದಿಷ್ಟ ಸಮಯ ಹೇಳಿ. ನಿಮ್ಮ ಸರ್ಕಾರಕ್ಕೆ ಒಂದು ಸಮಿತಿಯಲ್ಲ, 4 ಸಮಿತಿ ಮಾಡಬಹುದು. ರಾಜಕೀಯ ಇಚ್ಛಾಶಕ್ತಿ ಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ನಿರ್ದಿಷ್ಟವಾಗಿ ಒಂದು ವರ್ಷ ಮಾಡಿಯಾಯಿತು.

ಶ್ರೀ ಬಿ.ಸೋಮಶೇಖರ್ : ಇನ್ನೊಂದು ವರ್ಷ ಕೊಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ನೋಡೋಣ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಕಾಗೋಡು ತಿಮ್ಮಪ್ಪನವರ ಮಾತಿಗೆ ಬೆಲೆ ಕೊಟ್ಟು ನಾವು ಮಾಡಿದ್ದೆವು.

ಶ್ರೀ ಕಾಗೋಡು ತಿಮ್ಮಪ್ಪ : ಆ ಶಾಸನ ತಂದ ಸಂದರ್ಭದಲ್ಲಿ ಶ್ರೀ ಸೋಮಶೇಖರ್‌ರವರು ಕುಂದಾಯ ಮಂತ್ರಿಗಳಾಗಿದ್ದ ಕಾಲದಲ್ಲಿ ಅದನ್ನು ಪಾಸ್ ಮಾಡಲೇಬೇಕೆಂಬ ಒತ್ತಾಯ ಮಾಡಿದೆವು. ಈಗ ಆರಗ ಜ್ಞಾನೇಂದ್ರರವರು, ನೀವು ಇದ್ದೀರಿ. ಮಾನ್ಯ ಬಚ್ಚೇಗೌಡರ ಕಡೆ ಕಡಿಮೆ ಅರ್ಜಿಗಳಿರಬಹುದು. ನಮ್ಮ ಕಡೆ ಅರ್ಜಿಗಳು ಜಾಸ್ತಿ ಇವೆ. ಪ್ರಾಕ್ಟಿಕಲ್ ಆಗಿ ಏನು ನಡೆಯುತ್ತಿದೆ ಎಂಬುದನ್ನು ತಿಳಿಯಬೇಕು. ಒಂದು ವರ್ಷ ಸಮಯ ಕೊಟ್ಟರೆ, ಒಂದು ಅರ್ಜಿಯನ್ನೂ ತೀರ್ಮಾನ ಮಾಡಲಾಗಲಿಲ್ಲ. ಕಾರಣ, ಚುನಾವಣೆ ಬಂತು, ಕಮಿಟಿ ರಚನೆ ಆಗಿರಲಿಲ್ಲ. ಹಿಂದಿನ ಬಗರ್‌ಹುಕುಂ ಸಾಗುವಳಿ ಮಂಜೂರಾತಿ ಮಾಡುವ ಸಂದರ್ಭದಲ್ಲಿ ಇದ್ದ ಪದ್ಧತಿಗೂ, ಸೆಕ್ಷನ್ 94 (ಸಿ) ಗೂ ವ್ಯತ್ಯಾಸವೆಂದರೆ, ಆಗ ಸಮಿತಿಯವರು ನೇರವಾಗಿ ರೆಕಾರ್ಡ್‌ಗಳನ್ನು ಮಾಡಿ ತೀರ್ಮಾನ ಮಾಡಬಹುದಿತ್ತು. ಈಗ ಹಾಗಿಲ್ಲ. ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ವರದಿ ಕೊಟ್ಟ ನಂತರ, ಸಮಿತಿ ಮುಂದಿಟ್ಟು, ತೀರ್ಮಾನ ಮಾಡುವ ಪದ್ಧತಿಯನ್ನು ಇದರಲ್ಲಿ ಅಳವಡಿಸಿಕೊಂಡಿದ್ದೇವೆ. ಎಲ್ಲಾದರೂ ಮೋಸದಿಂದ ಬರಬಹುದೆಂಬ ಕಾರಣದಿಂದ; ಸ್ಕ್ರೀನ್ ಮಾಡುವುದನ್ನು ಮಾಡಿದ್ದೇವೆ ಈ ಪದ್ಧತಿಯನ್ನು ತೆಗೆದು ಹಾಕಿದರೆ, ತಾವು ಹೇಳಿದ ರೀತಿಯಲ್ಲಿ ಒಂದು ವರ್ಷ, ಇಷ್ಟು ವರ್ಷವೆಂದು ಮಾಡಬಹುದು.

ಶ್ರೀ ಬಿ. ಸೋಮಶೇಖರ್ : ಸ್ಥಳ ಪರಿಶೀಲನೆ, ರೆಕಾರ್ಡ್‌ಗಳ ಬಿಲ್ಡ್-ಅಪ್ ಎಲ್ಲಾ ಆಗಿ ಸಮಿತಿ ಮುಂದಿದೆ. ವಿಳಂಬ ಬೇಕಾಗಿಲ್ಲ.

ಶ್ರೀ ಆರಗ ಜ್ಞಾನೇಂದ್ರ:- ಸರ್ವೇಯರ್‌ಗಳನ್ನು ಅಪಾಯಿಂಟ್ ಮಾಡಿಲ್ಲ. ಫುರ್ತಿ ಫ್ಲಡ್ ಗೇಟ್ ಓಪನ್ ಮಾಡುವುದು ಬೇಡ. ಸರ್ವೆಯರ್‌ಗಳನ್ನು, ಸಿಬ್ಬಂದಿಗಳನ್ನು ನೇಮಿಸಿ. ನಮ್ಮಲ್ಲಿ ಒಂದೊಂದು ತಾಲ್ಲೂಕಿನಲ್ಲಿ 15 ಸಾವಿರ ಅರ್ಜಿಗಳಿವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಮಾಡಬೇಕು. ಕಟ್-ಆಫ್ ಡೇಟ್ ಕೊಡಬೇಕು. ಇನ್ನೂ 10 ವರ್ಷ ಮುಂದುವರೆಸಿಕೊಂಡು ಹೋಗುತ್ತೇವೆಂದರೆ, ಆಗುವುದಿಲ್ಲ. ಬಡವರ ಕಾರ್ಯಕ್ರಮ ತ್ವರಿತವಾಗಿ ಇಂಪ್ಲಿಮೆಂಟಾಗಬೇಕು. ನಿಮ್ಮ ಇಲಾಖೆಯಲ್ಲಿ ಸರ್ವೇಯರ್‌ಗಳಿಲ್ಲಿದ್ದಾರೆ? 6 ತಿಂಗಳು, ಒಂದು ವರ್ಷದೊಳಗೆ ಮಾಡಬೇಕೆಂದು ಹೇಳಿ. ಇಲ್ಲದಿದ್ದರೆ, ಯಾರೂ ಮಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ನೀವೇ ಸಮಿತಿ ಮಾಡುತ್ತೀರಾ?

ಶ್ರೀ ಎಸ್. ಸುರೇಶ್‌ಕುಮಾರ್:- ಹಿರಿಯ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡಿದ್ದನ್ನು ಕೇಳಿದೆ. ಅಂದರೆ, ರೂಲಿಂಗ್ ಗೌರ್ನಮೆಂಟ್‌ಗೆ ಹೋದ ತಕ್ಷಣ ಪ್ರಾಕ್ಟಿಕಲ್ ಆಸ್ಪೆಕ್ಟ್ಸ್ ಗೊತ್ತಾಗುತ್ತದೆ. ಇಲ್ಲಿ ಕುಳಿತಾಗ ಪ್ರಾಕ್ಟಿಕಲ್ ಆಸ್ಪೆಕ್ಟ್ಸ್ ಬೇಡ. ಪ್ರಾಕ್ಟಿಕಲ್ ಆಸ್ಪೆಕ್ಟ್ ಏನೆಂಬ ಬಗ್ಗೆ ನೀವು ಮಾತನಾಡಿದಿರಿ. ಇಲ್ಲಿ ಕುಳಿತಾಗ ನಾವು ಮಾತನಾಡಿದರೆ, ಪ್ರಾಕ್ಟಿಕಲ್ ಅಲ್ಲವೇ ಎಂಬುದು ಪ್ರಶ್ನೆ. ಎರಡನೆಯದು, ರಾಜ್ಯ ಸರ್ಕಾರ ನಮ್ಮದು ಟ್ರೈಂಬಾಂಡ್ ಸರ್ಕಾರವೆಂದು ಹೇಳಿಕೊಳ್ಳುವುದು, ಈಗ ಒಂದು ವರ್ಷ ಎಂಬ ಪದಗಳನ್ನು ಆವರಣದಲ್ಲಿರುವ ಅಂಕಿಗಳನ್ನು ಬಿಟ್ಟು ಬಿಡತಕ್ಕದ್ದು, ಯಾವಾಗಲೂ ಬಿಟ್ಟು ಬಿಡಲಾಗಿದೆಯೆಂದು ಭಾವಿಸತಕ್ಕದ್ದು ಎಂದರೆ, is it right? can you give an omnibus permission? ಸರ್ಕಾರಕ್ಕೆ, ಸರ್ಕಾರದ ಅಧಿಕಾರಿಗಳಿಗೆ ಇಂಥ ದಿವಸ ಮಾಡಿ ಎಂದು ಹೇಳುವ ತಾಕತ್ತು ಈ ಸದನಕ್ಕೆ ಇಲ್ಲದಿದ್ದರೆ, ಒಂದು ವರ್ಷವೋ, ಎರಡು ವರ್ಷಗಳೋ ಎಂಬುದನ್ನು ಸದನ ತೀರ್ಮಾನಿಸಲಿ. ಇಲ್ಲವಾದಲ್ಲಿ, ಅವನು ನಿವೃತ್ತಿಯಾಗುವವರೆಗೂ ಮಾಡುವುದಿಲ್ಲವೆಂದರೆ ಹೇಗೆ? ಸರ್ಕಾರದ ಒಂದು ಬಿಲ್ಲಿಗೆ ಮಹತ್ವ, ಮರ್ಯಾದೆ, ಕಮಿಟ್‌ಮೆಂಟ್ ಇರಬೇಕು. ಅದಕ್ಕಾಗಿ ಒಂದು ವರ್ಷಕ್ಕಾಗುವುದಿಲ್ಲವೇ, ಎರಡು ವರ್ಷಗಳೆಂದು ಡೇಟ್ ಫಿಕ್ಸ್ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಆರಗ ಜ್ಞಾನೇಂದ್ರರವರ ಕ್ಷೇತ್ರವಾದ ತೀರ್ಥಹಳ್ಳಿಯಲ್ಲಿ 15 ಸಾವಿರ ಅರ್ಜಿಗಳು ಇವೆಯೆಂದಿದ್ದಾರೆ. ಒಂದೇ ವರ್ಷ ಕೊಡುತ್ತೇವೆಂದರೆ ತಿಳಿದುಕೊಳ್ಳಲಿ..

ಶ್ರೀ ಬಿ.ಎನ್. ಬಚ್ಚೇಗೌಡ:- ಎಕ್ಸ್‌ಟೆನ್‌ಷನ್ ತೆಗೆದುಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ:- ನಮ್ಮ ತಾಲ್ಲೂಕಿನಲ್ಲಿ 15 ಸಾವಿರ ಅರ್ಜಿಗಳಿವೆ. ಒಂದು ವರ್ಷದಲ್ಲಿ ತೀರ್ಮಾನಿಸಿ ಎಂದು ಕಡ್ಡಾಯ ಮಾಡಿದರೆ, ಒಂದು ವರ್ಷಕ್ಕೆ ಕೆಲಸದ ದಿನಗಳು 300, ಅಷ್ಟರಲ್ಲಿ ನೀವೇ ಕುಳಿತುಕೊಂಡು ಇದನ್ನು ತೀರ್ಮಾನ ಮಾಡಿ ಕೊಟ್ಟರೆ....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇದು ನಿಮ್ಮ ಅಧಿಕಾರಿಗಳ ಮೇಲೆ ಹಿಡಿತವಿಲ್ಲದಿರುವುದನ್ನು ತೋರಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಹತ್ತಿರ ಅರ್ಜಿಗಳಿಲ್ಲ, ಅರಣ್ಯ ಭೂಮಿ. ನಮ್ಮ ಹತ್ತಿರ ಅರ್ಜಿ ಇವೆ. ಮಾನ್ಯ ಸುರೇಶ್ ಕುಮಾರ್‌ರವರು ಬಂದು ಒಂದು ವರ್ಷದಲ್ಲಿ ಇದನ್ನು ತೀರ್ಮಾನಿಸಿ.

Sri S. Suresh Kumar : We are not insisting on one year ಸಮಯ ಹೇಳಿ.

(ಗೊಂದಲ)

ಶ್ರೀ **ಕಾಗೋಡು ತಿಮ್ಮಪ್ಪ** : ಇದು ಪ್ರಾಕ್ಟಿಕಲಿ ಸಾಧ್ಯವೇ ಇಲ್ಲ.

ಶ್ರೀ **ಎಸ್. ಸುರೇಶ್‌ಕುಮಾರ್** : ಅಧ್ಯಕ್ಷರೆ, We are not insisting on one year.

ಶ್ರೀ **ಕಾಗೋಡು ತಿಮ್ಮಪ್ಪ** : ಸೆಕ್ಷನ್ 94 (ಎ) ಗೆ ತಂದಂಥ ತಿದ್ದುಪಡಿಗೂ ಇದಕ್ಕೂ ವ್ಯತ್ಯಾಸ ಇದೆ.

ಶ್ರೀ **ಎಸ್. ಸುರೇಶ್‌ಕುಮಾರ್** : ಏನು ವ್ಯತ್ಯಾಸ ಇದೆ ಹೇಳಿ?

ಶ್ರೀ **ಕಾಗೋಡು ತಿಮ್ಮಪ್ಪ** : ಅವತ್ತು ಅನಿವಾರ್ಯವಾಗಿ ನಮಗೆ ಈ ಮಸೂದೆ ಪಾಸ್ ಮಾಡಬೇಕಾಗಿತ್ತು.

ಶ್ರೀ **ಬಿ. ಸೋಮಶೇಖರ್** : ಮಾನ್ಯ ಉಪಾಧ್ಯಕ್ಷರೆ, ಬಗರ್‌ಹುಕುಮ್ ಸಾಗುವಳಿದಾರರಿಗೆ ಸಾಗುವಳಿ ಚೀಟಿಯನ್ನು ಕೊಡಬೇಕಾದರೆ ಮೊದಲು ಹಲವಾರು ತೊಡಕುಗಳು ಇದ್ದವು. ಸರ್ವೆಯರುಗಳು ಒಬ್ಬೊಬ್ಬರದ್ದನ್ನು ಮಾತ್ರ ಸರ್ವೆ ಮಾಡಿಕೊಂಡು ಕೊಡುತ್ತಿದ್ದರು. ಆ ರೀತಿ ಸರ್ವೆ ಮಾಡಿದ ಪಕ್ಕದನ್ನೇ ಬಿಟ್ಟುಬಿಡುತ್ತಿದ್ದರು. ತಮಗೆ ಬೇಕಾದವರನ್ನು ಮಾತ್ರ ರೆಕಾರ್ಡ್ ಮಾಡಿಕೊಂಡು ಬರುತ್ತಿದ್ದರು. ಆದ್ದರಿಂದ ನಾವು ಒಂದು ಸಲ ಸರ್ವೆ ಮಾಡಲು ಹೋದಾಗ ಎಲ್ಲವನ್ನು ಸರ್ವೆ ಮಾಡಿಕೊಂಡು ಬರಬೇಕೆಂದು ಸರಳೀಕರಣ ಮಾಡಿಕಳಿಸಿದ್ದೇವೆ. ಬಡವರಿಗೆ ಬೆಲೆಯನ್ನು ಮನ್ನಾ ಮಾಡಬೇಕೆಂದು ಮಾಡಿದ್ದೇವೆ. ಬಡವರಿಗೆ ನಿಜವಾಗಿ ಏನೇನು ಸೌಲಭ್ಯವನ್ನು ಕೊಡಬೇಕೋ ಅದೆಲ್ಲವನ್ನು ಮಾಡಿದ್ದೇವೆ ಇದು ಸರ್ಕಾರಕ್ಕೇನು ಕಷ್ಟಕರವಾದ ಕೆಲಸವೇನಲ್ಲ ಇಲ್ಲಿ ಕೆಲವು ಶಾಸಕರುಗಳ ತಪ್ಪು ಸಹ ಇದೆ. ಇದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತವೆ. ಶಾಸಕರುಗಳು ಪ್ರಾಮಾಣಿಕವಾಗಿ ಸಭೆಗಳನ್ನು ಮಾಡಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಶಾಸಕರುಗಳ ಪ್ರತಿಷ್ಟೆ ಹೆಚ್ಚಲ್ಲ. ಸರ್ಕಾರದ ಪ್ರತಿಷ್ಟೆ ಸಹಾ ಹೆಚ್ಚಲ್ಲ. ನಿಜವಾದ ಕಳಕಳಿ ಇದ್ದರೆ ಶಾಸಕರು ಸಭೆಗೆ ಬರದಿದ್ದರೂ ಸಹ ಸಭೆ ನಡೆಯಬೇಕು. ಜಾಸ್ತಿ ಅರ್ಜಿಗಳು ಇದ್ದರೆ ಎರಡು ಸಮಿತಿಗಳನ್ನು ಮಾಡಿ. ಶಾಸಕರು ಸಬೆಗೆ ಬರದಿದ್ದರೆ ಇನ್ನೊಬ್ಬ ಸದಸ್ಯರು ಸಭೆಯನ್ನು ನಡೆಸಬಹುದು ಎಂದು ಮಾಡಿ. ಆದರೆ ಅನಿರ್ದಿಷ್ಟಕಾಲ ಇದನ್ನು ಮಾಡಬಹುದು ಎಂಬುದನ್ನು ಮಾತ್ರ ಮಾಡಬೇಡಿ.

ಶ್ರೀ **ಕಾಗೋಡು ತಿಮ್ಮಪ್ಪ** : ಇದನ್ನು ಏಕೆ ಹೇಳುತ್ತೇನೆಂದರೆ, 94 (ಎ) ಗೆ ತಿದ್ದುಪಡಿಯನ್ನು ಮಾಡಬೇಕಾದರೂ I have actively participated in the debate. ಇದನ್ನು ತಾವು ಇದ್ದಾಗ ಮಾಡಿದ್ದು. ಅದಕ್ಕೂ ಇದಕ್ಕೂ ಇರುವ ವ್ಯತ್ಯಾಸವೇನೆಂದರೆ

Section 94 (B):

"Not withstanding anything contained in this Act, if the Deputy Commissioner or other officer authorised by the State Government in this behalf is satisfied after holding such enquiry he deems fit that a parson has prior to the 14th day of April unauthorisedly occupied any land including land referred in sub-section 2 or section 79 from which he is liable to be evicted under section....."

ಇದರ ಪ್ರಕಾರವಾಗಿ ಒಬ್ಬ ಆಥರೈಸ್ಡ್ ಅಧಿಕಾರಿ ಇದರ ಬಗ್ಗೆ ಪರಿಶೀಲನೆ ಮಾಡಿ ವರದಿ ಕೊಟ್ಟು ಅನಂತರ ಸಮಿತಿಗೆ ಬರಬೇಕು. ಸೆಕ್ಷನ್ 94 (ಎ) ನಲ್ಲಿ ಇದು ಇರಲಿಲ್ಲ. ಸಮಿತಿಯವರು ನೇರವಾಗಿ ಅರ್ಜಿಯನ್ನು ತೆಗೆದುಕೊಂಡು ಸ್ಥಳ ಪರಿಶೀಲನೆ ಮಾಡಿ ಇಲ್ಲವೆ ಕಂದಾಯ ಇನ್ಸ್‌ಪೆಕ್ಟರ್ ವರದಿಯ ಮೇಲೆ Straightaway they could have taken a decision. This is not the case.

Sri. B. Somashekhar : The Committee should meet once in a month whether the MLA attends or not. If necessary two meetings in a month. ಎಂದು ಹಾಗೆ ಮಾಡಿ ಆದರೆ ಇದನ್ನು ಮಾಡುವ ಇಚ್ಛಾಶಕ್ತಿ ತಮಗೆ ಬೇಕು. ನಾವು ಕೆಲವು ಸರಳೀಕರಣವನ್ನು ಇದರಲ್ಲಿ ಮಾಡಿದ್ದೇವೆ. ನಾವು ಸರ್ವೇಯರ್ ಕೆಲಸವನ್ನು ಖಾಸಗೀಕರಣ ಮಾಡಿದೆವು. ಇದು ಭಾರತ ದೇಶದಲ್ಲಿ ಒಂದು ಇತಿಹಾಸ. ಸೆಕ್ಷನ್ 18 ಆಫ್ ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ತಿದ್ದುಪಡಿ ತಂದು ಸರ್ವೆಯನ್ನು ಖಾಸಗಿಯವರಿಂದ ಮಾಡಿಸಬೇಕೆಂದು ಮಾಡಿದೆವು. ಆದರೆ ತಾವು ಅದರ ಬಗ್ಗೆ ಇನ್ನೂ ಆರ್ಡರ್‌ನ್ನು ಇಶ್ಯೂ ಮಾಡಿಲ್ಲ. ಇದನ್ನು ಮಾಡಲು ಆರು ತಿಂಗಳು ಬೇಕೆ? ರೂಲ್ಸ್ ಎಲ್ಲಾ ತಯಾರಾಗಿದೆ. ಅದಕ್ಕೆ ಆರ್ಡರ್ ಮಾಡಲು ಆರು ತಿಂಗಳು ಬೇಕೆ? ಅದನ್ನು ಮಾಡಿದ್ದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ 3 ಲಕ್ಷದ 33 ಸಾವಿರ ಪೋಡಿ ಕೇಸ್‌ಗಳು ಇದೆ. ಇವೆಲ್ಲವನ್ನು ಆರು ತಿಂಗಳಿನಲ್ಲಿ ಮುಗಿಸಲು ಆಗುವುದಿಲ್ಲವೆಂದು ಸರ್ಕಾರಿ ಸರ್ವೇಯರ್‌ನಿಂದ ಇದು ಸಾಧ್ಯವಾಗುವುದಿಲ್ಲವೆಂದು ಕಾನೂನಿಗೆ ತಿದ್ದುಪಡಿ ತಂದು ಖಾಸಗಿ ಸರ್ವೇಯರ್‌ಗಳಿಂದ ಈ ಕೆಲಸ ಮಾಡಿಸಬೇಕೆಂದು ಅರ್ಜಿಯನ್ನು ಕರೆದು ಇಂದು ಸರ್ವೆಯರ್ ಇಲಾಖೆಯ ನಿರ್ದೇಶಕರ ಕಛೇರಿಯಲ್ಲಿ ಲಕ್ಷಾಂತರ ಅರ್ಜಿಗಳು ಉಳಿದಿವೆ. ತಾವು ಕಳೆದ ಆರು ತಿಂಗಳಿನಿಂದ ಖಾಸಗಿ ಸರ್ವೆ ಮಾಡಲು ಪರವಾನಗಿ ಕೊಡದಿದ್ದರೆ ಈ ಕೆಲಸ ಹೇಗೆ ಆಗುತ್ತದೆ? ಬೇಡಿಕೆಯ ಬಗ್ಗೆ ಮಾತನಾಡಲು ಬಂದಾಗ ಇದರ ಬಗ್ಗೆ ವಿವರವಾಗಿ ಮಾತನಾಡುತ್ತೇನೆ. ಆದ್ದರಿಂದ ತಾವು ಇದನ್ನು ಮಾಡಲು ನಿರ್ದಿಷ್ಟವಾದ ಸಮಯ ಸೂಚಿಸಬೇಕು. ಬೇಕಾದರೆ ಎರಡು ವರ್ಷ ಬೇಕಾದರೂ ಮಾಡಿ. ಇಲ್ಲದಿದ್ದರೆ ಅಧಿಕಾರಿಗಳಿಗೆ ಭಯ ಬರುವುದಿಲ್ಲ. ಮಾನ್ಯ ಬಚ್ಚೇಗೌಡರು ಭೂ ಸುಧಾರಣಾ ಕಾಯ್ದೆ ಬಂದು 25 ವರ್ಷಗಳಾದರೂ ಇದನ್ನು ಮಾಡಲು ಆಗಿಲ್ಲವೆಂದು ಹೇಳಿದರು. ತಾವೇನು ಬಡವರ ಸರ್ಕಾರವೆಂದು

ಹೇಳಿಕೊಳ್ಳುತ್ತಿರೋ ಅದರಂತೆ ಇದನ್ನು ಮಾಡಿದರೆ ಬಡವರಿಗೆ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಇದನ್ನು ಮಾಡಲು ತಮಗೆ ಇಚ್ಛಾಶಕ್ತಿ ಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಕಳಕಳಿ ಏನೆಂದರೆ ಇದಕ್ಕೆ ಸಮಯವನ್ನು ನಿಗದಿ ಮಾಡಿ. ಅನಂತರ ಪರಿಸ್ಥಿತಿ ಏನಾಗುತ್ತದೋ ನೋಡೋಣ. ಇದನ್ನು ಪ್ರಿಸ್ಟೀಜಿಯಸ್ ಕೆಲಸವಾಗಿ ತೆಗೆದುಕೊಳ್ಳುವುದು ಬೇಡ.

ಶ್ರೀ ಕಾಗೋಡು ತಿಮ್ಮಪ್ಪ : ಈ ಹಿಂದೆ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವ ಬಗ್ಗೆ ಸೆಕ್ಷನ್ 94 (ಎ) ತಿದ್ದುಪಡಿಯನ್ನು ತಂದಿದ್ದೆವು. ಆಗ ನಾವು ಸಮಯವನ್ನು ನಿಗದಿ ಮಾಡಿರಲಿಲ್ಲ. ಆಗಲೂ ಸಹ ನಮ್ಮಲ್ಲಿ ಇಪ್ಪತ್ತು ಲಕ್ಷ ಅರ್ಜಿ ಇದ್ದವು. ಅದರಲ್ಲಿ ಏಳೆಂಟು ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಆಗ ನಾವು ಈ ರೀತಿ ಸಮಯವನ್ನೇನು ನಿಗದಿ ಮಾಡಿರಲಿಲ್ಲವಲ್ಲ?

ಶ್ರೀ ಬಿ. ಸೋಮಶೇಖರ್ : ತಾವು ಆಡಳಿತ ಪಕ್ಷದಲ್ಲಿದ್ದಾಗ ತಮ್ಮ ಚಿಂತನೆ ಬದಲಾಗಬಾರದು. ಒಂದೂವರೆ ವರ್ಷಗಳ ಹಿಂದೆ ನಾವು ಈ ಬಿಲ್ಲನ್ನು ತಂದಾಗ ಇದರ ಬಗ್ಗೆ ತಾವೇ ಒತ್ತಾಯ ಮಾಡಿದ್ದು. ತಮ್ಮ ಮಾತಿಗೆ ಬೆಲೆ ಕೊಟ್ಟು ನಾವು ಒಂದು ವರ್ಷಕ್ಕೆ ಇದನ್ನು ಇಳಿಸಿದ್ದು.

ಶ್ರೀ ಕಾಗೋಡು ತಿಮ್ಮಪ್ಪ : ಆಗ ಅಧ್ಯಕ್ಷರು ಇದ್ದರು. ಇದು ಕಮಿಟಿ ಮುಂದೆ ಬರಬೇಕಾದ ಅಗತ್ಯವಿರಲಿಲ್ಲ. ಕೊನೆಗೆ ಒತ್ತಾಯ ಮಾಡಿ ಒಂದು ದಿನ ಮಸೂದೆಯನ್ನು ಸದನದಲ್ಲಿ ಮುಂದಕ್ಕೆ ಹಾಕಿಸಿಕೊಂಡು ಅನಂತರ ಇದನ್ನು ತಂದೆವು. "We may within one year from the date of the commencement of the Karnataka Land Revenue Act and subject to... as may be prescribed make recommendations to the committee or the additional committee." ಇದನ್ನು ಅನಂತರ ಸೇರಿಸಿರುವುದು. ಇಲ್ಲದಿದ್ದರೆ ಆ ಅಧಿಕಾರಿಯೇ ಮಾಡುವ ಅಧಿಕಾರವಿತ್ತು. ಸಮಿತಿಯ ಮುಂದೆ ಇದು ಬರಬೇಕು ಎಂಬುದನ್ನು ನಾವು ಒತ್ತಾಯ ಮಾಡಿದ ಮೇಲೆ ಕೊನೆಗೆ ತಾವು ಮಾರನೆ ದಿವಸ ತಿದ್ದುಪಡಿಯನ್ನು ತಂದು ಈ ರೀತಿ ಮಾಡಿದಿರಿ. ಕಮಿಟಿ ಮುಂದೆ ಬರುವುದಕ್ಕೆ ಮಾಡಿದಿರಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಶಾಸಕರು ರೆಗ್ಯುಲರ್ ಆಗಿ ಸಭೆಗಳನ್ನು ಮಾಡುತ್ತಿದ್ದರು. ಆದರೂ ಸಹ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಶೀಲ್ದಾರರುಗಳು ರೆಕಾರ್ಡ್ ಮಾಡಿ ತಂದಿಡುತ್ತಿರಲಿಲ್ಲ. ನಾವು ಬೆಳಿಗ್ಗೆಯಿಂದ ಸಂಜೆಯವರೆಗೆ ಸಭೆಯಲ್ಲಿ ಕುಳಿತಿದ್ದರೂ ಎರಡು ರೆಕಾರ್ಡ್‌ಗಳು ಬರುತ್ತಿರಲಿಲ್ಲ. ಆದ್ದರಿಂದ ತಾವು ಸಮಯವನ್ನು ನಿಗದಿ ಮಾಡದಿದ್ದರೆ ಅಧಿಕಾರಿಗಳಿಗೆ ನಮಗೆ ಪುರುಸೊತ್ತು ಇದ್ದಾಗ ಮಾಡುತ್ತೇವೆ ಎಂದು ಪರವಾನಗಿಯನ್ನು ಕೊಟ್ಟಂತೆ ಆಗುತ್ತದೆ. ಬೇಕಾದರೆ ಎರಡು ವರ್ಷ ನಿಗದಿ ಮಾಡಿ. ಆದರೆ ಅಧಿಕಾರಿಗಳ ಮೇಲೆ ಇಂತಿಷ್ಟು ರೆಕಾರ್ಡ್‌ಗಳನ್ನು ಆ ಸಭೆಯಲ್ಲಿ ಇಡಬೇಕೆಂದು ಮಾಡಬೇಕು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಮೂರು ವರ್ಷ ಕಾಲಮಿತಿ ನಿಗದಿ ಮಾಡಿ ಎಂದು ಸಲಹೆ ನೀಡಿದರು. ಅದನ್ನು ಸರ್ಕಾರ ಒಪ್ಪುತ್ತದೆ. ಮೂರು ವರ್ಷ ಕಾಲಮಿತಿ ನಿಗದಿ ಮಾಡೋಣ. ಇದರ ಬಗ್ಗೆ ಇನ್ನು ಚರ್ಚೆ ಬೇಡ.

ಶ್ರೀ ಪಿ.ಜಿ. ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಅನುಮತಿಯನ್ನು ಕೋರಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೂರು ವರ್ಷ ಕಾಲಮಿತಿ ನಿಗದಿ ಪಡಿಸಬೇಕೆಂಬ ವಿರೋಧ ಪಕ್ಷದವರ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿದ್ದಾರೆ, ಬಹಳ ಸಂತೋಷ. ನೀವು ಅಧಿಕಾರಕ್ಕೆ ಬಂದು ಆರು ತಿಂಗಳಾದರೂ ಕೂಡ ಇನ್ನೂ ಏಕೆ ಬಹಳಷ್ಟು ಕಮಿಟಿಗಳನ್ನು ರಚಿಸಿಲ್ಲ? ಇದಕ್ಕೇನು ಕಾರಣ? ಆಡಳಿತ ಪಕ್ಷದ ಶಾಸಕರ ಹಿತಾಸಕ್ತಿಗಳನ್ನು ನೀವು ಕಾಪಾಡಬೇಕಾಗುತ್ತದೆ. ನಾವು ಅಧಿಕಾರದಲ್ಲಿ ಇದ್ದಾಗಲೂ ಅದೇ ಕೆಲಸವನ್ನೇ ಮಾಡಿದ್ದೇವೆ. ನೀವು ಆರಾಧನಾ ಸಮಿತಿಗಳನ್ನು ಇನ್ನೂ ರಚಿಸಿಲ್ಲ. ಬಗರ್ ಹುಕುಂ ಸಾಗುವಳಿ ಸಮಿತಿಗಳನ್ನು ಇದುವರೆಗೂ ಮಾಡಲಿಕ್ಕೆ ನಿಮ್ಮಿಂದಾಗಿಲ್ಲ. ಆಶ್ರಯ ಸಮಿತಿಗಳನ್ನೂ ಕೂಡ ಇದುವರೆಗೂ ಸರ್ಕಾರದವರು ರಚಿಸಿಲ್ಲ. ಈ ರೀತಿ ಏಕೆ? ನೀವು ನಮ್ಮದು ಈ- ಮೇಲ್ ಸರ್ಕಾರ, ಎಲೆಕ್ಟ್ರಾನಿಕ್ಸ್ ಸರ್ಕಾರ ಎಂದು ಹೇಳಿಕೊಳ್ಳುತ್ತಿದ್ದೀರಿ. ಸರ್ಕಾರದ ಕೆಲಸಗಳು ಆಗಬೇಕೆಂದರೆ ಕೆಳಹಂತದಲ್ಲಿ ಈ ಸಮಿತಿಗಳು ರಚನೆಯಾಗಬೇಕಲ್ಲವೆ? ನೀವು ಮೂರು ವರ್ಷ ಅರ್ಜಿಗಳನ್ನು ವಿಲೇವಾರಿ ಮಾಡಲು ಸಮಯವನ್ನು ಈಗ ತೆಗೆದುಕೊಂಡರೂ ಸಹ ಇನ್ನೂ ಒಂದು ವರ್ಷ ನೀವು ಸಮಿತಿಗಳನ್ನೇ ರಚನೆ ಮಾಡದೇ ಹೋದರೆ ನಿಮ್ಮ ಕಾಂಗ್ರೆಸ್ ಕಾರ್ಯಕರ್ತರ ಗತಿ ಏನು? ಎಂದು ನನಗೆ ಅರ್ಥವಾಗುತ್ತಿಲ್ಲ. ಯಾವುದೇ ಆಡಳಿತ ಪಕ್ಷದವರಾಗಲೀ, ತಮ್ಮ ಕಾರ್ಯಕರ್ತರ ಭಾವನೆಗಳನ್ನು ಅರ್ಥಮಾಡಿಕೊಂಡು ಅವರನ್ನು ಸಮಾಧಾನಪಡಿಸಬೇಕಾಗುತ್ತದೆ. ಶಾಸಕರಿನ್ನೂ ಇದೀಗ ತಾನೇ ಹೊಸದಾಗಿ ಆಯ್ಕೆಯಾಗಿರುವುದರಿಂದ ಅವರು ಇನ್ನೂ ಸುಮ್ಮನಿದ್ದಾರೆ. ವಿವಿಧ ಸಮಿತಿಗಳನ್ನು ರಚಿಸುವ ಮೂಲಕ ನೀವು 7-8 ಸಾವಿರ ನಿಮ್ಮ ಪಕ್ಷದ ಕಾರ್ಯಕರ್ತರನ್ನು ಅವುಗಳಲ್ಲಿ ಅಕಾಮಡೇಟ್ ಮಾಡಬಹುದಾಗಿದೆ. ನಿಮ್ಮ ತೊಂದರೆಯೇನು? ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಿಮ್ಮಲ್ಲೇನಾದರೂ ಆಂತರಿಕ ಕಲಹವೇನಾದರೂ ಇದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಸಿಂಧ್ಯಾರವರು ದಯವಿಟ್ಟು ನಮ್ಮ ವಿರುದ್ಧ ಎತ್ತಿ ಕಟ್ಟುವ ಕೆಲಸ ಮಾಡಬಾರದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಸರ್ಕಾರದವರು ಆಶ್ರಯ ಸಮಿತಿ ಮತ್ತು ಬಗರ್ ಹುಕುಂ ಸಾಗುವಳಿ ಸಮಿತಿಗಳನ್ನು ಆದಷ್ಟು ಬೇಗನೇ ರಚನೆ ಮಾಡಬೇಕು.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಸಿಂಧ್ಯಾರವರು ಕಾಂಗ್ರೆಸ್ ಕಾರ್ಯಕರ್ತರನ್ನು ಸಮಿತಿಗಳಲ್ಲಿ ಅಕಾಮಡೇಟ್ ಮಾಡಿಕೊಳ್ಳಬಹುದೆಂದು ಹೇಳಿದರು. ಈಗ ಅಷ್ಟೊಂದು ಕಾರ್ಯಕರ್ತರನ್ನು ಹೇಗೆ ಅಕಾಮಡೇಟ್ ಮಾಡುವುದು ಎಂಬುದೇ ಅವರ ಸಮಸ್ಯೆಯಾಗಿದೆ. ಒಂದೊಂದು ತಾಲ್ಲೂಕಿನಿಂದ 2-3 ಗುಂಪುಗಳು ಇವೆ. ಅವರು ತಮ್ಮಗಳನ್ನೇ ಸಮಿತಿಗೆ ನೇಮಿಸಿ ಎಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ

ಚುನಾವಣೆಗಳು ಆಗುವವರೆಗೆ ಕಾದು ನಂತರ ಸಮಿತಿಗಳಲ್ಲಿ ಅವರನ್ನು ಅಕಾಮಡೇಟ್ ಮಾಡಿದರೆ ಹೊಡೆದಾಟಗಳು ಆಗುವುದಿಲ್ಲ ಎಂಬ ಕಾರಣಕ್ಕಾಗಿ ಬಹುಶಃ ಸಮಿತಿಗಳ ರಚನೆ ಕಾರ್ಯವನ್ನು ಸರ್ಕಾರ ಮುಂದಕ್ಕೆ ಹಾಕಿರಬೇಕು. ಆದರೆ ಇದರಿಂದ ಬಡವರ ಕಾರ್ಯಕ್ರಮ ಜಾರಿಯಾಗುವುದಿಲ್ಲ. ಆದ್ದರಿಂದ ಬೇಗನೆ ಆ ಸಮಿತಿಗಳನ್ನು ರಚಿಸಬೇಕು.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"2000ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

CLAUSE No. 2

SRI B. SOMASHEKHAR : Sir I beg to move.

" That for clause-2 of the said Bill, the following shall be substituted namely:-

"2. Amendment of Section 94 B:- In Section 94(B) of the Karnataka Land Revenue Act, 1964 (Karnataka Act 12 of 1964), the words, brackets and figures "within one year from the date of commencement of the Karnataka Iand Revenue (Amendment) Act, 1997" the words, bracckets and figures "within three years from the date of commencement of the Karnataka Iand Revenue (Amendment) Act, 2000 shall be substituted."

The question was proposed

MR. DEPUTY SPEAKER : The question is:

"That for clause-2 of the said Bill, the following shall be substituted namely:-

"2. Amendment of Section 94 B:- In Section 94 (B) of the Karnataka Land Revenue Act, 1964 (Karnataka Act 12 of 1964), the words, brackets and figures "within one year from the date of commencement of the Karnataka Land Revenue

(Amendment) Act, 1997" the words, brackets and figures "within three years from the date of commencement of the Karnataka Land Revenue (Amendment) Act, 2000 shall be substituted."

The motion was adopted

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ,

"ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):- ಮಾನ್ಯ ಉಪಾಧ್ಯಕ್ಷರೇ, 2000ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:-ಪ್ರಸ್ತಾವ ಏನೆಂದರೆ,

"2000ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು